ದಿನಾಂಕಃ 06.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಶ್ರೀ ಕೆ.ಎಸ್.ಎಸ್.ಪಿ. ವಕೀಲರಿಂದ – ಆರೋಪಿ ಪರವಾಗಿ

1. ನಾನು West Ward Ho ನ ಎಸ್ಟೇಟಿನಲ್ಲಿ ಮ್ಯಾನೇಜರ್ ಆಗಿರುತ್ತೇನೆ. ನನಗೆ 65 ಸಾವಿರ ವೇತನ ನೀಡುತ್ತಾರೆ. ನಾನು ಎಸ್ಟೇಟಿನ ಕ್ವಾಟ್ರಸ್ ನಲ್ಲಿ ಕೆಲಸ ಇದ್ದಾಗ ವಾಸವಿರುತ್ತೇನೆ ಮತ್ತು ಬಣಕಲ್ ನಲ್ಲಿ ನಮ್ಮ ತಂದೆ ತಾಯಿಯ ಜೊತೆ ವಾಸವಿರುತ್ತೇನೆ. ನಾನು ನಮ್ಮ ತಂದೆ ತಾಯಿಯ ಜೊತೆ ವಾಸವಿದ್ದೇನೆ, ನನ್ನ ತಮ್ಮ ಬೇರೆ ಕಡೆ ವಾಸವಿರುತ್ತಾರೆ. ಆರೋಪಿ ನನಗೆ 20 ವರ್ಷಗಳಿಂದ ಪರಿಚಯ. ನಮ್ಮ ಚಿಕ್ಕಮ್ಮನ ಮನೆ ಹಳೆಕೆರೆ ಮತ್ತು ಆರೋಪಿಯ ಮನೆ ಹಳೆಕೆರೆ ಆಗಿದ್ದರಿಂದ ಆಕೆಯ ಪರಿಚಯ ಇದೆ. ನಮ್ಮ ಚಿಕ್ಕಮ್ಮನ ಹೆಸರು ಕೀರ್ತಿ, ನನ್ನ ಚಿಕ್ಕಮ್ಮನ ಗಂಡ ತೀರಿಕೊಂಡಿದ್ದಾರೆ. ನನ್ನ ಚಿಕ್ಕಮ್ಮನ ಮನೆ ಹಳೆಕೆರೆ ಸರ್ಕಲ್ ನಲ್ಲಿ ಬರುತ್ತದೆ. ಆರೋಪಿಯ ಮದುವೆ 2005-2006 ರಲ್ಲಿ ಆಗಿರುತ್ತದೆ. ಆಕೆಯನ್ನು ಕೆ.ಆರ್ ಪೇಟೆಯ ಕುಂದೂರಿಗೆ ಮದುವೆ ಮಾಡಿಕೊಡಲಾಗಿರುತ್ತದೆ. ಆರೋಪಿಯ ಗಂಡನ ಮನೆಯ ವಿಳಾಸ ಕೆ.ಆರ್ ಪೇಟೆಯ ಕುಂದೂರು ಆಗಿರುತ್ತದೆ. ಸಾಕ್ಷಿ ಮುಂದುವರೆದು ಆರೋಪಿಯ ಗಂಡನ ಮನೆ ಚಿಕ್ಕಮಗಳೂರಿನಲ್ಲಿ ಬರುತ್ತದೆ.
2. ಆರೋಪಿಯ ಗಂಡ ಮೆಡಿಕಲ್ ಶಾಪ್ ಗಳಿಗೆ ಔಷಧಿಯನ್ನು ದೊಡ್ಡ ಪ್ರಮಾಣದಲ್ಲಿ ಸರಬರಾಜು ಮಾಡುತ್ತಿದ್ದರು. ಆರೋಪಿಯ ಗಂಡನ ಅಂಗಡಿಗೆ ನಾನು ಹೋಗಿಲ್ಲ. ಆರೋಪಿಯ ಮನೆಗೆ ನಾನು ಹೋಗಿಲ್ಲ. ಆರೋಪಿಯ ಅಜ್ಜಿ ಮನೆ ಹಳೆಕೆರೆಯಿಂದ ಒಳಗೆ ಹೋಗಬೇಕು. ಆರೋಪಿಯ ಅಜ್ಜಿ ಹೆಸರು ನನಗೆ ಗೊತ್ತಿಲ್ಲ. ನಾನು 2 ಬ್ಯಾಂಕುಗಳಲ್ಲಿ ಖಾತೆ ಹೊಂದಿದ್ದೇನೆ. ಚೆಕ್ಕುಗಳ ಬಗ್ಗೆ ನನಗೆ ಜ್ಞಾನ ಇರುತ್ತದೆ. ಆರೋಪಿಯ ಹೆಸರು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಅರ್ಪಿತ ಯಾನೆ ಹರಿಣಾಕ್ಷಿ ಯಾನೆ ಮಂಜುಳಾ ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಆರೋಪಿಯನ್ನು ಹಳೆಕೆರೆಯ ಆಕೆಯ ಅಜ್ಜಿಯ ಮನೆಯಲ್ಲಿ ಕರೆಯುತ್ತಾರೆ. ಆರೋಪಿಯನ್ನು ಆ 3 ಹೆಸರುಗಳಿಂದ ಕರೆಯುತ್ತಿದ್ದರು ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.
3. ಆರೋಪಿಯ ಮೇಲೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಈ ಪ್ರಕರಣವನ್ನು

ದಾಖಲಿಸಿದ್ದೇನೆ ಎಂದು ಚಿಕ್ಕಮಗಳೂರಿನ ಸಿ.ಜೆ.ಎಂ ನ್ಯಾಯಾಲಯದಲ್ಲಿ ಸಿ.ಸಿ.1715/2022 ರಂತೆ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಸಾಕ್ಷಿ ಆ ಪ್ರಕರಣವನ್ನು ವಜಾ ಕೋರಿ ಮೇಲ್ಮನವಿ ಸಲ್ಲಿಸಿದ್ದೇನೆ ಎಂದು ಸ್ವತಃ ನುಡಿಯುತ್ತಾರೆ. ಆ ಪ್ರಕರಣ ಭಾರತೀಯ ಕಂಡ ಸಂಹಿತೆ ಕಲಂ 209, 467, 468, 471, 474 ರಡಿ ದಾಖಲಾಗಿದೆ ಎಂದರೆ ಸರಿ. ಆ ಪ್ರಕರಣದಲ್ಲಿ ನಾನು ಜಾಮೀನು ಪಡೆದು ಮುದ್ದತ್ತಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇನೆ ಎಂದರೆ ಸರಿ. ನಾನು ವಜಾ ಕೋರಿ ಸಲ್ಲಿಸಿರುವ ಮೇಲ್ಮನವಿಯಲ್ಲಿ ಯಾವುದೇ ತಡೆಯಾಜ್ಞೆ ದೊರೆತಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈಗಲು ನಾನು ಸಿ.ಜೆ.ಎಂ ನ್ಯಾಯಾಲಯಕ್ಕೆ ಹಾಜರಾಗುತ್ತೇನೆ ಎಂದರೆ ಸರಿ. ಆ ಸಿ.ಸಿ ಪ್ರಕರಣದಲ್ಲಿ ಈ ಪ್ರಕರಣದಲ್ಲಿ ನಾನು ಸಲ್ಲಿಸಿರುವ ಚೆಕ್ಕಿಗೆ ಸಂಬಂಧಿಸಿದಂತೆ ಬ್ಯಾಂಕಿನ ಮ್ಯಾನೇಜರ್ ನ ವಿಚಾರಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

4. ಸಾಕ್ಷಿಗೆ ನೀವು ಈ ಕೇಸಿನಲ್ಲಿ ಹಾಜರು ಪಡಿಸಿರುವ ಚೆಕ್ಕು ಮಂಜುಳಾ ಎಂಬುವವರ ಖಾತೆಗೆ ಸೇರಿದೆ ಎಂದು ಕೆನರಾ ಬ್ಯಾಂಕು, ಕೋಟೆ ಶಾಖೆಯ ಮ್ಯಾನೇಜರ್ ಸಿ.ಜೆ.ಎಂ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿ ಇದ್ದ ಪ್ರಕರಣದಲ್ಲಿ ಹಾಜರು ಪಡಿಸಿದ್ದಾರೆ ಎಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಹೆಸರು ಮಂಜುಳಾ ಇದೆ ಆ ದಾಖಲೆಯ ಬಗ್ಗ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೆನರಾ ಬ್ಯಾಂಕು, ಕೋಟೆ ಶಾಖೆಯ ಮ್ಯಾನೇಜರ್ ಸಿ.ಜೆ.ಎಂ ನ್ಯಾಯಾಲಯದಲ್ಲಿ ನಾನು ಈ ಕೇಸಿನಲ್ಲಿ ಹಾಜರು ಪಡಿಸಿರುವ ನಿ.ಪಿ.1 ಚೆಕ್ಕು ಮಂಜುಳಾ ರವರಿಗೆ ಸೇರಿದ್ದು ಎಂದು ತೋರಿಸಲು ಆಕೆ ಖಾತೆ ತೆರೆಯಲು ಸಲ್ಲಿಸಿದ್ದ ಅರ್ಜಿ, ಆಕೆಯ ಮತಧಾನದ ಗುರುತಿನ ಚೀಟಿ ಹಾಜರು ಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಖಾತೆ ತೆರೆಯಲು ಸಲ್ಲಿಸಿದ ಅರ್ಜಿಯಲ್ಲಿ ಮಂಜುಳಾ ರವರ ಗಂಡನ ಹೆಸರು ಜಯದೇವ ಆಚಾರ್, ವಿಳಾಸ ಕಣದಾಳ್ ಬೀದಿ, ಕೋಟೆ ಎಂದು ಕಾಣಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

5. ಹರಿಣಾಕ್ಷಿ ರವರ ಗಂಡನ ಹೆಸರು ಅನೀಲ್ ಕುಮಾರ್ ಎಂದರೆ ಸರಿ. ಅನೀಲ್ ಕುಮಾರ್ ರವರ ವಿಳಾಸ ಚಿಕ್ಕಮಗಳೂರಿನ ಕುವೆಂಪು ಪಾರ್ಕ್ ಆಗಿರುತ್ತದೆ. ಅವರ

ಮನೆಯ ಹೆಸರು ನನಗೆ ಗೊತ್ತಿಲ್ಲ. ನಿ.ಪಿ.1 ರಲ್ಲಿ ಕಂಡು ಬರುವ ಸಹಿ ಮತ್ತು ಈಗ ನನಗೆ ತೋರಿಸಿದ ಖಾತೆ ತೆರೆಯುವ ದೃಢೀಕೃತ ನಕಲಿನ ಅರ್ಜಿಯಲ್ಲಿ ಇರುವ ಸಹಿಗಳು ಒಂದೇ ಎಂದರೆ ಇರಬಹುದು. ಮಂಜುಳಾ ರವರ ಖಾತೆ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ, ನಾನು ಹಾಜರು ಪಡಿಸಿರುವ ನಿ.ಪಿ.1 ಚೆಕ್ಕಿನಲ್ಲಿ ಇರುವ ಖಾತೆ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ. ಸಿ.ಸಿ.1715/2022 ಅನ್ನು ವಜಾ ಕೋರಿ ಸಲ್ಲಿರುವ ಮೇಲ್ಮನವಿಯಲ್ಲಿ ಸಿ.ಸಿ.1715/2022 ರಲ್ಲಿ ಹಾಜರು ಪಡಿಸಿರುವ ದಾಖಲೆಗಳನ್ನು ನಾನು ಪಡೆದುಕೊಂಡಿದ್ದೇನೆ. ಆ ದಾಖಲೆಗಳನ್ನು ನಾನು ನೋಡಿದ್ದೇನೆ. ಈಗ ನನಗೆ ತೋರಿಸಲಾದ ದೃಢೀಕೃತ ದಾಖಲೆಗಳ ಪೈಕಿ ಅನುಷಾ ಎಂಬುವವರು ನೀಡಿರುವ ಪ್ರಮಾಣಿಕೃತ ಹೇಳಿಕೆ ಇತ್ತು ಎಂದು ಸಾಕ್ಷಿ ಗುರುತಿಸಿದ್ದರಿಂದ ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ನಿ.ಡಿ.1 ದಾಖಲೆಯ ಪ್ರಕಾರ ಬ್ಯಾಂಕಿನ ವ್ಯವಸ್ಥಾಪಕರು ತಮ್ಮ ಸಾಕ್ಷ್ಯದಲ್ಲಿ ಮಂಜುಳಾ ಬೇರೆ, ಹರಿಣಾಕ್ಷಿ ಬೇರೆ ಎಂದು ಹೇಳಿದ್ದಾರೆ ಎಂದರೆ ಸರಿ. ಮಂಜುಳಾ ರವರ ಗಂಡ ಮತ್ತು ಹರಿಣಾಕ್ಷಿ ರವರ ಗಂಡ ಬೇರೆ ಬೇರೆ ಎಂದು ಅವರು ಹೇಳಿದ್ದಾರೆ ಎಂದರೆ ಇರಬಹುದು. ಬ್ಯಾಂಕಿನ ವ್ಯವಸ್ಥಾಪಕರು ನಿ.ಪಿ.1 ಚೆಕ್ಕು ಸಂಖ್ಯೆ ಮತ್ತು ಖಾತಾ ಸಂಖ್ಯೆ ಮಂಜುಳಾ ರವರಿಗೆ ಸೇರಿದ್ದು ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

6. ನಿ.ಪಿ.1 ಅನ್ನು ಬ್ಯಾಂಕಿಗೆ ಹಾಜರು ಪಡಿಸಿದಾಗ Dormant ಎಂಬ ಹಿಂಬರಹದೊಂದಿಗೆ ಬಂದಿತ್ತು. ಬ್ಯಾಂಕಿನವರನ್ನು Dormant ಎಂದರೆ ಏನು ಎಂದು ನಾನು ವಿಚಾರಿಸಿಲ್ಲ. ನಿ.ಪಿ.1 ಯಾರಿಗೆ ಸೇರಿದ್ದು, ಯಾವ ಖಾತೆ ನಂಬರ್ ನದ್ದು ಎಂದು ನಾನು ವಿಚಾರಿಸಲಿಲ್ಲ. ಆ ಖಾತೆ ಚಾಲ್ತಿಯಲ್ಲಿ ಇದೆಯೋ ಇಲ್ಲವೋ ಎಂದು ನಾನು ವಿಚಾರಿಸಲಿಲ್ಲ. ಆ ಖಾತೆಯಲ್ಲಿ ಹಣ ಇದೆಯೋ ಇಲ್ಲವೋ ಎಂದು ನಾನು ವಿಚಾರಿಸಲಿಲ್ಲ. ಆರೋಪಿಗೆ ನೋಟೀಸು ನೀಡುವ ಮೊದಲು Dormant ಎಂದರೆ ಏನು ಎಂದು ನಾನು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ. ಆರೋಪಿಗೆ ನೋಟೀಸು ಜಾರಿಯಾದ ಬಳಿಕ ಆರೋಪಿ ತನ್ನ ವಕೀಲರ ಮೂಲಕ ನಿ.ಪಿ.6 ರಂತೆ ಪ್ರತ್ಯುತ್ತರ ನೋಟೀಸು ನೀಡಿದ್ದಾರೆ ಎಂದರೆ

ಸರಿ. ಸಾಕ್ಷಿ ಸ್ವಾತಃ ಸುಳ್ಳು ಪ್ರತ್ಯುತ್ತರ ನೀಡಿದ್ದಾರೆ ಎಂದು ನುಡಿಯುತ್ತಾರೆ. ನಿ.ಪಿ.6 ರಲ್ಲಿ ನಾನು ಯಾರು ಎಂದು ಗೊತ್ತಿಲ್ಲ, ನನಗೂ ಮತ್ತು ಅವರ ಮಧ್ಯೆ ಯಾವುದೇ ವ್ಯವಹಾರ ಇಲ್ಲ ಎಂದು ಹೇಳಿದ್ದಾರೆ. ನಿ.ಪಿ.6 ಅನ್ನು ಓದಿದ್ದೇನೆ. ಈಗ ಅಷ್ಟಾಗಿ ನೆನಪಿಲ್ಲ. ನಿಪಿ.6 ರಲ್ಲಿ ಆಶ್ಚರ್ಯ ಆಗಿದೆ ಎಂದು ಹೇಳಿ ಬರೆಸಿದ್ದಾರೆ. ನಿ.ಪಿ.6 ರಲ್ಲಿ ನಿ.ಪಿ.1 ತನಗೆ ಸೇರಿಲ್ಲ, ಅದರಲ್ಲಿ ಇರುವ ಸಹಿ ಮತ್ತು ಖಾತೆ ಸಂಖ್ಯೆ ತನ್ನದಲ್ಲ ಎಂದು ಆರೋಪಿ ಹೇಳಿದ್ದಾರೆ ಎಂದರೆ ಸರಿ. ನಿ.ಪಿ.6 ತಲುಪಿದ ಬಳಿಕ ನಿ.ಪಿ.1 ಚೆಕ್ಕು ಆರೋಪಿಗೆ ಸೇರಿದೆಯೋ ಇಲ್ಲವೋ ಎಂದು ನಾನು ವಿಚಾರ ಮಾಡಿಲ್ಲ. ಬ್ಯಾಂಕಿನವರನ್ನು ಆ ಬಗ್ಗೆ ವಿಚಾರಿಸಲು ನನಗೆ ತೊಂದರೆ ಇರಲಿಲ್ಲ.

7. ನಿ.ಪಿ.1 ಎಷ್ಟನೇ ವರ್ಷದ ಚೆಕ್ಕು ಎಂದು ನಾನು ನೋಡಿಲ್ಲ. ನಿ.ಪಿ.1 ಚೆಕ್ಕು 2014 ಎಂದು ಸಾಕ್ಷಿಗೆ ನಿ.ಪಿ.1 ಅನ್ನು ತೋರಿಸಿ ಕೇಳಲಾಗಿ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ನಿ.ಪಿ.1 ರಲ್ಲಿ ಕಂಡು ಬರುವ ಸಹಿ ಮತ್ತು ಬರವಣಿಗೆಯ ಇಂಕಿನಲ್ಲಿ ವ್ಯತ್ಯಾಸ ಇದೆ ಎಂದರೆ ಸರಿ. ನಿ.ಪಿ.1 ರಲ್ಲಿ ಬರೆದಿರುವ ಹೆಸರು ಮತ್ತು ಸಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ರಲ್ಲಿ ಇರುವ ಸಹಿ ಮತ್ತು ಆರೋಪಿ ನ್ಯಾಯಾಲಯಕ್ಕೆ ಸಲ್ಲಿಸಿರುವ ವಕಾಲತ್ ನಾಮೆಯಲ್ಲಿ ಇರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿ. ನಿ.ಪಿ.1 ಅನ್ನು ಯಾರು ಬೆದಿದ್ದರು ಎಂದರೆ ಸಾಕ್ಷಿ ಬರೆದು ತಂದಿದ್ದರು, ಯಾರು ಬರೆದಿದ್ದರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

8. ಸಾಕ್ಷಿಗೆ ರಿಜಿಸ್ಟರ್ ಪೋಸ್ಟ್ ನ ತೆರೆದ ಅಂಚೆ ಲಕೋಟೆಯನ್ನು ತೋರಿಸಲಾಗಿ ಸಾಕ್ಷಿ ಆ ನೋಟೀಸನ್ನು ತಮ್ಮ ವಕೀಲರಾದ ಆದರ್ಶ್ ರವರು ಕಳುಹಿಸಿದ ಅಂಚೆ ಲಕೋಟೆಯ ಖಾಲಿ ಕವರ್ ಎಂದು ಗುರುತಿಸಿದ್ದರಿಂದ ಅದನ್ನು ನಿ.ಡಿ.2 ಎಂದು ಗುರುತಿಸಲಾಯಿತು. ನಿ.ಪಿ.3 ನೋಟೀಸಿನಲ್ಲಿ ಆರೋಪಿಯ ವಿಳಾಸವನ್ನು ಅರ್ಪಿತ ಯಾನೆ ಹರಿಣಾಕ್ಷಿ ಯಾನೆ ಮಂಜುಳಾ ಎಂದು ಕಳುಹಿಸಿದ್ದೇನೆ. ನಿ.ಡಿ.2 ರ ಮೇಲೆ ಮಂಜುಳಾ ಎಂಬ ಹೆಸರು ಇಲ್ಲ. ನಿ.ಪಿ.4 ಅಂಚೆ ಸ್ವೀಕೃತಿಯಲ್ಲಿ ಮಂಜುಳಾ ಎಂಬ ಹೆಸರು ಇಲ್ಲ. ನಿ.ಪಿ.3 ರಲ್ಲಿ 3 ಹೆಸರುಗಳನ್ನು ಕಾಣಿಸಿ ನಿ.ಡಿ.2 ಮತ್ತು ನಿ.ಪಿ.4 ರ ಮೇಲೆ ಮಂಜುಳಾ ಹೆಸರನ್ನು ಏಕೆ ಕಾಣಿಸಲಿಲ್ಲ ಎಂದರೆ ಸಾಕ್ಷಿ

ಅವುಗಳನ್ನು ನಮ್ಮ ವಕೀಲರು ಕಳುಹಿಸಿದ್ದಾರೆ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ದಾಖಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ.

9. 2020 ರ ಜನವರಿ ಮೊದಲನೇ ವಾರದಲ್ಲಿ ಆರೋಪಿ ನನ್ನ ಬಳಿ ಹಣ ಕೇಳಿದ್ದರು, ದಿನಾಂಕ ನೆನಪಿಲ್ಲ. ನಿ.ಪಿ.1 ಅನ್ನು ದಿಃ 20.08.2020 ರಲ್ಲಿ ಮೂಡಿಗೆರೆಯ ಅರಣ್ಯ ಇಲಾಖೆಯ ಬಳಿ ನೀಡಿದ್ದರು. ಆರೋಪಿ ಹಣ ಕೇಳಿದ ಒಂದು ದಿನದ ಬಳಿಕ ಬಣಕಲ್ ನಲ್ಲಿ ನೀಡಿದ್ದೇನೆ. 5 ರಿಂದ 10 ಸಾವಿರದ ಹಣದ ವ್ಯವಹಾರವನ್ನು ಮಾಡುವಾಗ ಚೆಕ್ಕು ಮೂಲಕ ಮಾಡಬೇಕು ಎಂದರೆ ಸರಿ. ಆರೋಪಿ ಹಣಕಾಸಿನಲ್ಲಿ ನನಗಿಂತ ಉತ್ತಮ ಸ್ಥಿತಿಯಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಗಂಡನನ್ನು ನಾನು ಭೇಟಿ ಮಾಡಿಲ್ಲ. ಆರೋಪಿ ತಾವು ಲಾಸ್ ನಲ್ಲಿ ಇದ್ದೇವೆ, business improve ಮಾಡಬೇಕು ಎಂದು ತಿಳಿಸಿದ್ದರು. ಆರೋಪಿಯ ಗಂಡ 30 ವರ್ಷಗಳಿಂದ ಔಷಧಿ ಮಾರಾಟದ ಸಗಟು ವ್ಯಾಪಾರಿ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ನನ್ನಿಂದ ಹಣ ಪಡೆಯುವ ಅವಶ್ಯತೆ ಇರಲಿಲ್ಲ ಎಂದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಹಣವನ್ನು ನೀಡುವ ಮೊದಲು ಆಕೆಯ ಗಂಡನನ್ನು ಮಾತನಾಡಿಸಬೇಕು ಎಂದು ನನಗೆ ಅನಿಸಲಿಲ್ಲ.

10. ನಾನು ಸುಳ್ಳು ನೋಟೀಸು ಕೊಡಿಸಿದ್ದೇನೆ ಎಂದು ಆರೋಪಿ ನನ್ನ ವಿರುದ್ಧ ಎಸ್.ಪಿ ಕಚೇರಿಗೆ ದೂರನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರವಾಗಿ ಬಣಕಲ್ ಪೊಲೀಸರು ನಿಮ್ಮನ್ನು ಕರೆಸಿದ್ದಾರಾ ಎಂದರೆ ಕರೆಸಿಲ್ಲ. ನನಗೆ ಹರಿಣಾಕ್ಷಿ ಯಾರು ಎಂದು ತಿಳಿದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಹಣವನ್ನು ಪಡೆದಿದ್ದಾರೆ, ಆಕೆ ಹಳೆಕೆರೆ ಗ್ರಾಮದಲ್ಲಿ ಪರಿಚಯ ಆಗಿದ್ದರು ಎಂಬುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಗೆ ನಾನು ಹಣ ನೀಡಿದ್ದ, ಆರೋಪಿ ಆ ಹಣ ಪಾವತಿಸಲು ದಿಃ 28.12.2020 ರಂದು ಚೆಕ್ಕನ್ನು ನೀಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮನೆ ಎಲ್ಲಿ ಇದೆ ಎಂಬುದು ಸಹ ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಮಧ್ಯೆ ಯಾವುದೇ ವ್ಯವಹಾರ ನಡೆದಿಲ್ಲ,

ನ್ಯಾಯಾಲಯದ ಮುಂದೆಯೇ ನಾನು ಅವರನ್ನು ಮೊದಲ ಬಾರಿಗೆ ನೋಡಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ವ್ಯವಹಾರ ನಡೆಯದೇ ಇದ್ದರು ಸುಳ್ಳು ನೋಟೀಸನ್ನು ಆರೋಪಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ.

11. ಆರೋಪಿಗೆ ನಾನು ನಿ.ಪಿ.3 ರಂತೆ ನೋಟೀಸು ಕಳುಹಿಸಿದ ಬಳಿಕ ಆರೋಪಿಯ ಗಂಡ ನನ್ನ ಬಳಿ ಬಂದು ನೀವು ಯಾರು ಎಂದು ನನ್ನನ್ನು ವಿಚಾರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಗಂಡ ಯಾವುದೇ ವ್ಯವಹಾರ ನಡೆಯದೇ ಇದ್ದರು ಯಾವ ಕಾರಣಕ್ಕೆ ನೋಟೀಸು ನೀಡಿದ್ದೀರಿ, ನಿಮ್ಮ ಮೇಲೆ ಪ್ರಕರಣವನ್ನು ದಾಖಲಿಸುತ್ತೇವೆ ಎಂದು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಆರೋಪಿಯ ಗಂಡನಿಗೆ ನಿಮ್ಮ ಸಂಬಂಧಿ ಒಬ್ಬರು ಸಹಿ ಹಾಕು ಎಂದು ಹೇಳಿದ ಕಾರಣ ನಾನು ಸಹಿ ಹಾಕಿದ್ದೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಕೇಸನ್ನು ವಾಪಸ್ಸು ತೆಗೆಯುತ್ತೇನೆ ಎಂದು ಅಕ್ರಮ ಹಣಕ್ಕಾಗಿ ಬೇಡಿಕೆ ಇಟ್ಟಿದ್ದೆ ಎಂದರೆ ಸುಳ್ಳು. ಆರೋಪಿಯ ವಿಳಾಸವನ್ನು ಆಕೆಯ ಕಿಡಿಗೇಡಿ ಸಂಬಂಧಿಕರು ನೀಡಿದ ಕಾರಣ ಈ ಪ್ರಕರಣವನ್ನು ಆ ವಿಳಾಸ ಕಾಣಿಸಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

12. ನಿ.ಪಿ.1 ಚೆಕ್ಕು ಆರೋಪಿಗೆ ಸೇರದೇ ಇದ್ದರು ಸಹ ಮತ್ತು ಆರೋಪಿ ಯಾವುದೇ ವ್ಯವಹಾರವನ್ನು ನನ್ನ ಜೊತೆ ಮಾಡದೇ ಇದ್ದರು ಸಹ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ</u>

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ